(ಸರ್ವೋಚ್ಚ ನ್ಯಾಯಾಲಯ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜೆ. ಚಲಮೇಶ್ವರ

ಹಾಗೂ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ಅಬ್ದುಲ್ ನಜೀರ್ ಶ್ರೀಮತಿ ಭಾರತಿ ರೆಡ್ಡಿ

ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು

ಸಿವಿಲ್ ಅಪೀಲುಸಂಖ್ಯೆ: 10587/2017,ದಿನಾಂಕ: 17 ನೇ ಆಗಸ್ಟ್, 2017.

ತೀರ್ಪು

ನ್ಯಾಯಮೂರ್ತಿ ಶ್ರೀ ಎಸ್. ಅಬ್ದುಲ್ ನಜೀರ್:

1. ಅನುಮತಿ ನೀಡಲಾಗಿದೆ.

2. ಅಪೀಲುದಾರರು,ದಿನಾಂಕ: 20.2.2016 ರಂದು ನಡೆದ ಚುನಾವಣೆಯಲ್ಲಿ ಸಾಮಾನ್ಯ (ಮಹಿಳಾ) ಪ್ರವರ್ಗಕ್ಕೆ ಸಂಬಂಧಿಸಿದಂತೆ ಮೀಸಲಿರಿಸಿದಂಥ 13 ಬದನಹಟ್ಟಿ ಚುನಾವಣಾ ಕ್ಷೇತ್ರದಿಂದ ಬಳ್ಳಾರಿಯ ಜಿಲ್ಲಾ ಪಂಚಾಯತ್ನ ಸದಸ್ಯರಾಗಿ ಚುನಾಯಿತರಾಗಿರುತ್ತಾರೆ.ರಾಜ್ಯ ಸರ್ಕಾರವು, ಹಿಂದುಳಿದ ವರ್ಗಗಳ-ಬಿ (ಮಹಿಳಾ) ಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತ್, ಬಳ್ಳಾರಿಯ ಅಧ್ಯಕ್ಷರ ಹುದ್ದೆಯನ್ನು ಮೀಸಲಿರಿಸಿದಿನಾಂಕ: 15.4.2016 ರಂದು ಅಧಿಸೂಚನೆಯನ್ನು ಹೊರಡಿಸಿರುತ್ತದೆ.ಅಪೀಲುದಾರರು, ಸದರಿ ಪದಕ್ಕೆ ಸ್ಪರ್ಧಿಸಿದ್ದು, ಚುನಾಯಿತರಾಗಿರುತ್ತಾರೆಂದು ಘೋಷಿಸಲಾಗಿರುತ್ತದೆ.6 ರಿಂದ 9 ರ ವರೆಗಿನ ಪ್ರತ್ಯರ್ಜಿದಾರರು ಬಳ್ಳಾರಿ ಜಿಲ್ಲೆಯ ನಿವಾಸಿಗಳಾಗಿದ್ದು, ಪ್ರಶ್ನಿತ ಜಿಲ್ಲಾ ಪಂಚಾಯತ್ನ ಚುನಾವಣೆಯಲ್ಲಿ ಮತದಾರರಾಗಿದ್ದರು.ಅವರುಗಳು ಅಪೀಲುದಾರಳು ಹಿಂದುಳಿದ ವರ್ಗ (ಬಿ) ಗಳಿಗೆ ಸೇರುವುದಿಲ್ಲ ಹಾಗೂ ಬಳ್ಳಾರಿಯ ಕುರುಗೋಡಿನ ತಹಸೀಲ್ದಾರರು ನೀಡಿದ ಸುಳ್ಳು ಜಾತಿ ಪ್ರಮಾಣಪತ್ರದ ಆಧಾರದ ಮೇಲೆ ಚುನಾವಣೆಯಲ್ಲಿ ಸ್ಪರ್ಧಿಸಿರುತ್ತಾಳೆಂಬ ವಾದದ ಆಧಾರದ ಮೇಲೆ ಅಧ್ಯಕ್ಷಳಾಗಿ ಚುನಾಯಿತಳಾಗಿರುವುದನ್ನು ಪ್ರಶ್ನಿಸಿ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠದಲ್ಲಿ 2016 ರ ರಿಟ್ ಅರ್ಜಿ ಚಸಂಖ್ಯೆ: 106417 ನ್ನು ಸಲ್ಲಿಸಿರುತ್ತಾರೆ.ಅಪೀಲುದಾರಳು, ಭಾರತ ಸಂವಿಧಾನದ 243- ಒ ಅನುಚ್ಛೇಧದ (ಬಿ) ಖಂಡದಲ್ಲಿ ಒಳಗೊಂಡ ನಿಷೇಧಕ್ಕೆ ಸಂಬಂಧಿಸಿದಂತೆ ರಿಟ್ ಅರ್ಜಿಯ ಊರ್ಜಿತತ್ವಕ್ಕೆ ಆಕ್ಷೇಪಣೆಯನ್ನು ಎತ್ತಿರುತ್ತಾರೆ.ಅಲ್ಲದೆ ಅಧಿಕಾರ ವ್ಯಾಪ್ತಿಯ ಜಿಲ್ಲಾ ನ್ಯಾಯಾಧೀಶರ ಎದುರು ಚುನಾವಣಾ ಅರ್ಜಿಯ ರೂಪದಲ್ಲಿ ಚುನಾವಣೆಯನ್ನು ಬಾಧಿತ ವ್ಯಕ್ತಿಯು ಪ್ರಶ್ನಿಸಬೇಕೆಂದು ಸಹ ವಾದಿಸಲಾಗಿರುತ್ತದೆ.

3.ದಿನಾಂಕ: 21.10.2016 ರ ತಮ್ಮ ಆದೇಶದ ಮೂಲಕ ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರು, ಸಂವಿಧಾನದ 243- ಒ ಅನುಚ್ಛೇಧದ (ಬಿ) ಖಂಡದಲ್ಲಿ ಒಳಗೊಂಡ ನಿಷೇಧದ ಹಿನ್ನೆಲೆಯಲ್ಲಿ ಊರ್ಜಿತತ್ವದ ಆಧಾರದ ಮೇಲೆ ರಿಟ್ ಅರ್ಜಿಯನ್ನು ವಜಾ ಮಾಡಿರುತ್ತಾರೆ.ಮಾನ್ಯ ಏಕ-ಸದಸ್ಯ ನ್ಯಾಯಪೀಠದ ನ್ಯಾಯಾಧೀಶರು, ಬಾಧಿತ ಪಕ್ಷಕಾರರು ಅಧಿಕಾರ ವ್ಯಾಪ್ತಿಯಿರುವ ಜಿಲ್ಲಾ ನ್ಯಾಯಾಧೀಶರ ಎದುರು ಚುನಾವಣಾ ಅರ್ಜಿಯನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಲು ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯತ್ನ ಅಧ್ಯಕ್ಷ ಹಾಗೂ ಉಪಾಧ್ಯಕ್ಷನ 7 ನೇ ನಿಯಮವನ್ನು ಉಲ್ಲೇಖಿಸಿರುತ್ತಾರೆ.

4. 6 ರಿಂದ 9 ರ ವರೆಗಿನ ಪ್ರತ್ಯರ್ಜಿದಾರರು, ವಿಭಾಗೀಯ ಪೀಠದ ಎದುರು 2016 ರ ರಿಟ್ ಅಪೀಲುಸಂಖ್ಯೆ: 101459 ನ್ನು ಸಲ್ಲಿಸುವ ಮೂಲಕ ಸದರಿ ಆದೇಶವನ್ನು ಪ್ರಶ್ನಿಸಿರುತ್ತಾರೆ.ದಿನಾಂಕ: 5.6.2017 ರಂದಿನ ಆದೇಶದ ಮೂಲಕ ವಿಭಾಗೀಯ ಪೀಠವು, ರಿಟ್ ಅರ್ಜಿಯು ಊರ್ಜಿತವಾಗಿರುತ್ತದೆಂದು ಅಭಿಪ್ರಾಯಪಟ್ಟು ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರ ಆದೇಶವನ್ನು ರದ್ದುಪಡಿಸಿರುತ್ತದೆ.ವಿಭಾಗೀಯ ಪೀಠವು, ಎಲ್ಲಾ ಇತರೆ ಪ್ರಶ್ನೆಗಳನ್ನು ಮುಕ್ತವಾಗಿಟ್ಟುಕೊಂಡು ಪ್ರಕರಣವನ್ನು ಹೊಸದಾಗಿ ವಿಲೆ ಮಾಡಲು ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರಿಗೆ ವಿಷಯವನ್ನು ಹಿಂದಕ್ಕೆ ಕಳುಹಿಸಿರುತ್ತದೆ.ಅಪೀಲುದಾರರು, ಈ ಅಪೀಲಿನಲ್ಲಿನ ಸದರಿ ಆದೇಶದ ಕಾನೂನಾತ್ಮಕತೆ ಹಾಗೂ ಸರಿತನವನ್ನು ಪ್ರಶ್ನಿಸಿರುತ್ತಾರೆ.

5. ಅಪೀಲುದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳಾದ ಶ್ರೀ ಮುಕುಲ್ ರೋಹಟಗಿಯವರು ಅಪೀಲುದಾರನ ಆಯ್ಕೆಯನ್ನು ಪ್ರಶ್ನಿಸಿ 6 ರಿಂದ 9 ರ ವರೆಗಿನ ಪ್ರತ್ಯರ್ಜಿದಾರರು ಸಲ್ಲಿಸಿದ ರಿಟ್ ಅರ್ಜಿಯು ಭಾರತ ಸಂವಿಧಾನದ 243- ಓ ಅನುಚ್ಛೇದದಲ್ಲಿ ಒಳಗೊಂಡ ನಿಷೇಧದ ಪರಿಭಾಷೆಯ ಹಿನ್ನೆಲೆಯಲ್ಲಿ ಊರ್ಜಿತವಾಗಿರುವುದಿಲ್ಲವೆಂದು ನಿವೇದಿಸಿಕೊಂಡಿರುತ್ತಾರೆ.ಬಾಧಿತ ಪಕ್ಷಕಾರರಿಗೆ ಲಭ್ಯವಾಗುವ ಏಕಮಾತ್ರ ಪರಿಹಾರವೆಂದರೆ, ಅಧಿಕಾರ ವ್ಯಾಪ್ತಿಯಿರುವ ಜಿಲ್ಲಾ ನ್ಯಾಯಾಧೀಶರ ಮುಂದೆ ಆಯ್ಕೆಯ ಅರ್ಜಿಯನ್ನು ಸಲ್ಲಿಸುವುದಾಗಿರುತ್ತದೆಂದು ನಿವೇದಿಸಲಾಗಿರುತ್ತದೆ.ಈ ಸಂಬಂಧದಲ್ಲಿ ಇವರು ಚರಣ್ಲಾಲ್ ಸಾಹು -ವಿರುದ್ಧ ಕೆ.ಆರ್ ನಾರಾಯಣನ್ 1-ಪ್ರಕರಣದಲ್ಲಿ ಈ ನ್ಯಾಯಾಲಯವು ನೀಡಿರುವ ತೀರ್ಪನ್ನು ಉದಾಹರಿಸಿರುತ್ತಾರೆ.

6. ಮತ್ತೊಂದು ಕಡೆ, 6 ರಿಂದ 9 ರ ವರೆಗಿನ ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ಹಿರಿಯ ವಕೀಲರಾದ ಡಾ || ರಾಜೀವ್ ದವನ್ರವರು 6 ರಿಂದ 9 ರ ವರೆಗಿನ ಪ್ರತ್ಯರ್ಜಿದಾರರು, ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಮತದಾರರಾಗಿರುತ್ತಾರೆ.ಅವರು ಜಿಲ್ಲಾ ಪಂಚಾಯತ್ನ ಸದಸ್ಯರಾಗಿಲ್ಲದಿರುವುದರಿಂದ ಚುನಾವಣಾ ಅರ್ಜಿಯನ್ನು ಸಲ್ಲಿಸಲಾಗುವುದಿಲ್ಲ.ಜಿಲ್ಲಾ ಪಂಚಾಯತ್ನ ಸದಸ್ಯರಾಗಿರದಂಥ ಹಾಗೂ ಅಧ್ಯಕ್ಷರ ಚುನಾವಣೆಯಿಂದ ಬಾಧಿತರಾಗಿರುವಂಥ ಮತದಾರರು ಸಲ್ಲಿಸಿದ ರಿಟ್ ಅರ್ಜಿಯನ್ನು ಊರ್ಜಿತತ್ವದ ಆಧಾರದ ಮೇಲೆ ವಜಾಗೊಳಿಸಿದ್ದಲ್ಲಿ ಆ ಪ್ರಶ್ನೆ ಪರಿಹಾರವಿಲ್ಲದೆ ಉಳಿದುಬಿಡುತ್ತದೆಂದು ವಾದಿಸಿರುತ್ತಾರೆ.ಅಲ್ಲದೆ ನ್ಯಾಯಿಕ ಪುನರವಲೋಕನವು ಸಂವಿಧಾನದ ಮೂಲ ಸ್ವರೂಪವಾಗಿರುತ್ತದೆಂದೂ ಸಹ ವಾದಿಸಿರುತ್ತಾರೆ.

7. ನಾವು ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ನಿವೇದನೆಗಳನ್ನು ಎಚ್ಚರಿಕೆಯಿಂದ ಪರಿಗಣಿಸಿರುತ್ತೇವೆ.ನಮ್ಮ ಪರಿಗಣನೆಗೆ ಸಂಬಂಧಿಸಿದಂತೆ ನಮ್ಮಲ್ಲಿ ಉದ್ಭವವಾದ ಒಂದೇ ಕಿರು ಪ್ರಶ್ನೆಯೆಂದರೆ, ಜಿಲ್ಲಾ ಪಂಚಾಯತ್ನ ಸದಸ್ಯರಾಗಿಲ್ಲದಂಥ ಮತದಾರರು ಜಿಲ್ಲಾ ಪಂಚಾಯತ್ ಅಧ್ಯಕ್ಷರ ಆಯ್ಕೆಯನ್ನು ಪ್ರಶ್ನಿಸಿ ಸಲ್ಲಿಸಿದ ರಿಟ್ ಅರ್ಜಿಯು ಊರ್ಜಿತವಾಗಿರುತ್ತದೆಯೆ ಎಂಬುದಾಗಿರುತ್ತದೆ.

8. 243, 243- ಎ ರಿಂದ 243- ಓ ಅನುಚ್ಛೇದಗಳನ್ನು ಒಳಗೊಂಡ IX ಭಾಗವನ್ನು ಸಂವಿಧಾನದ 73 ನೇ ತಿದ್ದುಪಡಿ ಅಧಿನಿಯಮ, 1992 ರ ಮೂಲಕ ಸೇರಿಸಲಾಗಿರುತ್ತದೆ.ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸೂಕ್ತವಾಗಿರುವಂಥ 243- ಓ ಅನುಚ್ಛೇದವನ್ನು ಈ ಮುಂದಿನಂತೆ ಓದಲಾಗಿರುತ್ತದೆ.

243 &. ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯವು ಮಧ್ಯಪ್ರವೇಶಿಸುವುದರ ಪ್ರತಿಷೇಧ:ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ,

(ಎ) ಚುನಾವಣಾ ಕ್ಷೇತ್ರಗಳ ಸೀಮಾನಿರ್ಣಯಕ್ಕೆ ಸಂಬಂಧಿಸಿದ ಯಾವುದೇ ಕಾನೂನಿನ ಸಿಂಧುತ್ವವನ್ನು ಅಥವಾ 243 ಕೆ ಅನುಚ್ಛೇದದ ಮೇರೆಗೆ ಮೇರೆಗೆ ಮಾಡಲಾದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಅಂಥ ಚುನಾವಣಾ ಕ್ಷೇತ್ರಗಳ ಸ್ಥಾನಗಳ ಹಂಚಿಕೆಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ;

(ಬಿ) ಯಾವುದೇ ಪಂಚಾಯತಿಗೆ ನಡೆಯುವ ಯಾವುದೇ ಚುನಾವಣೆಯನ್ನು, ರಾಜ್ಯ ವಿಧಾನ ಮಂಡಲವು ರಚಿಸಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಲಾದ ಂ ಥ ಪ್ರಾಧಿಕಾರಕ್ಕೆ ಮತ್ತು ಉಪಬಂಧಿಸಲಾದಂಥ ರೀತಿಯಲ್ಲಿ ಚುನಾವಣಾ ಅರ್ಜಿಯನ್ನು ಸಲ್ಲಿಸಿದ ಹೊರತು ಪ್ರಶ್ನಿಸತಕ್ಕದ್ದಲ್ಲ.

9. 243- ಓ ಅನುಚ್ಛೇಧದ (ಬಿ) ಉಪ-ಪ್ರಕರಣವನ್ನು ಓದಿದೊಡನೆ, ಯಾವುದೇ ಪಂಚಾಯಿತಿಗೆ ನಡೆಯುವ ಯಾವುದೇ ಚುನಾವಣೆಯನ್ನು, ರಾಜ್ಯ ವಿಧಾನ ಮಂಡಲವು ರಚಿಸಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಉಪಬಂಧಿಸಲಾದಂಥ ಪ್ರಾಧಿಕಾರಕ್ಕೆ ಮತ್ತು ಉಪಬಂಧಿಸಬಹುದಾದಂಥ ರೀತಿಯಲ್ಲಿ ಚುನಾವಣಾ ಅರ್ಜಿಯನ್ನು ಸಲ್ಲಿಸಿದ ಹೊರತು ಪ್ರಶ್ನಿಸತಕ್ಕದ್ದಲ್ಲವೆಂಬುದು ತಿಳಿದು ಬರುತ್ತದೆ.

10. ಜಿಲ್ಲಾ ಪಂಚಾಯತ್ನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರುಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಅಧಿನಿಯಮ, 1993 ರ 177 ನೇ ನಿಯಮ ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯತ್ನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಗೆ) ನಿಯಮಗಳು, 1994 ರ 7 ನೇ ನಿಯಮಗಳಿಗನುಸಾರವಾಗಿ ಆಯ್ಕೆ ಮಾಡಲಾಗುತ್ತದೆ.ಸದರಿ ನಿಯಮವನ್ನು ಈ ಮುಂದಿನಂತೆ ಓದಲಾಗಿರುತ್ತದೆ:

" 7, ಚುನಾವಣಾ ವಿವಾದ ಅರ್ಜಿ:( 1) ಜಿಲ್ಲಾ ಪಂಚಾಯತ್ನ ಅಧಿಕಾರ ವ್ಯಾಪ್ತಿಯೊಳಗೆ ಬರುವಂಥ ಜಿಲ್ಲಾ ಪಂಚಾಯತ್ನ ಯಾರೇ ಸದಸ್ಯನು ಚುನಾವಣಾ ಅರ್ಜಿಯೊಂದಿಗೆ, 2000 ರೂ.ಗಳನ್ನು ಠೇವಣಿ ಮಾಡುವ ಮೂಲಕ ಚುನಾವಣಾ ಫಲಿತಾಂಶದ ಘೋಷಣೆಯ ದಿನಾಂಕದಿಂದ 15 ದಿನಗಳೊಳಗೆ ಸದರಿ ಜಿಲ್ಲಾ ನ್ಯಾಯಾಧೀಶರ ಎದುರು ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆಯನ್ನು ಪ್ರಶ್ನಿಸಬಹುದು.

ಈ ನಿಯಮದಿಂದ ಜಿಲ್ಲಾ ಪಂಚಾಯತನ ಸದಸ್ಯೇತರ ವ್ಯಕ್ತಿಯು ಚುನಾವಣಾ ಅರ್ಜಿಯನ್ನು ಸಲ್ಲಿಸುವಂತಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ.

11. ಅಪೀಲುದಾರರ ಪರ ಮಾನ್ಯ ಹಿರಿಯ ವಕೀಲರು, ಉಚ್ಚ ನ್ಯಾಯಾಲಯವು, ಸಂವಿಧಾನದ 226 ನೇ ಅನುಚ್ಛೇದವನ್ನು ಹೊರತುಪಡಿಸಿ, ಸಂವಿಧಾನದ 243- ಓ ಅನುಚ್ಛೇದದ (ಬಿ) ಖಂಡದಲ್ಲಿ ಒಳಗೊಂಡ ಪ್ರತಿಷೇಧದ ದೃಷ್ಟಿಯಲ್ಲಿ ರಿಟ್ ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲವೆಂದು ವಾದಿಸಿರುತ್ತಾರೆ.ಬಾಧಿತ ವ್ಯಕ್ತಿ 7 ನೇ ನಿಯಮದಲ್ಲಿ ಉಪಬಂಧ ಕಲ್ಪಿಸಿದ ಪರಿಹಾರವನ್ನು ತಾನೇ ಸ್ವತಃ ಪಡೆದುಕೊಳ್ಳಬೇಕಾಗುತ್ತದೆಂದೂ ವಾದಿಸಲಾಗಿರುತ್ತದೆ.

12. ಈ ವಾದದಲ್ಲಿ ಯಾವುದೇ ಹುರುಳಿರುವುದು ನಮಗೆ ಕಂಡು ಬಂದಿರುವುದಿಲ್ಲ.ನಿರ್ದಿಷ್ಟ ಪಂಚಾಯತ್ನಲ್ಲಿನ ಮತದಾರನು ಪಂಚಾಯತ್ನ ಅಧ್ಯಕ್ಷನ ಆಯ್ಕೆಯ ಮೂಲಕ ಬಾಧಿತನಾಗಿದ್ದಲ್ಲಿ, ಪರಿಹಾರೋಪಾಯವನ್ನು ಪಡೆಯಲಾಗದೆ ಇರಲಾಗದೆಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ.ಶ್ರೀ ಶ್ರೀ ಶ್ರೀ ಕೇಶವಾನಂದ ಭಾರತಿ

ಶ್ರೀಪಾದಗಳವರು -ವಿರುದ್ಧ ಕೇರಳ ಸರ್ಕಾರ ಮತ್ತು ಮತ್ತೊಬ್ಬರು, 2 ಪ್ರಕರಣದಲ್ಲಿ, ಈ ನ್ಯಾಯಾಲಯದ ಹದಿಮೂರು ಜನ ನ್ಯಾಯಾಧೀಶರ ಪೀಠವು, ಸಂವಿಧಾನದ 368 ನೇ ಅನುಚ್ಛೇದವು ಸಂವಿಧಾನದ ಮೂಲ ವಿನ್ಯಾಸ ಅಥವಾ ಚೌಕಟ್ಟನ್ನು ಮಾರ್ಪಡಿಸಲು ಸಂಸತ್ತನ್ನು ಶಕ್ತಗೊಳಿಸಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.ಸಂವಿಧಾನದ ಮೂಲ ಸ್ವರೂಪವನ್ನು ಯಾವುದೇ ಸಂವಿಧಾನಾತ್ಮಕ ತಿದ್ದುಪಡಿಯ ಮೂಲಕ ಮಾರ್ಪಾಡುಗೊಳಿಸಲಾಗುವುದಿಲ್ಲ.ಮೂಲ ಲಕ್ಷಣಗಳಲ್ಲಿ ಒಂದೆಂದರೆ ನ್ಯಾಯಿಕ ಪುನರವಲೋಕನದಲ್ಲಿನ ಸಂವಿಧಾನಾತ್ಮಕ ವ್ಯವಸ್ಥೆಯ ಅಸ್ತಿತ್ವವಾಗಿರುತ್ತದೆಂಬ ಅಸಂದಿಗ್ಧತೆ ಇಲ್ಲದೆ ನಿಬಂಧನೆಗಳಲ್ಲಿ ಅದನ್ನು ಅಭಿಪ್ರಾಯಪಡಲಾಗಿರುತ್ತದೆ.ಈ ಅಭಿಪ್ರಾಯವನ್ನು ಮಿನರ್ವ ಮಿಲ್ಸ್ ಲಿ. ಮತ್ತು ಇತರರು ವಿರುದ್ಧ ಭಾರತ ಒಕ್ಕೂಟ ಹಾಗೂ ಇತರರು 3 ಪ್ರಕರಣದಲ್ಲಿ ಸಂವಿಧಾನ ಪೀಠವು ಅನುಸರಿಸಿರುತ್ತದೆ.ಎಲ್.ಚಂದ್ರಕುಮಾರ್ -ವಿರುದ್ಧ ಭಾರತ ಸರ್ಕಾರ ಮತ್ತು ಇತರರು 4* ಪ್ರಕರಣದಲ್ಲಿ, ಈ ನ್ಯಾಯಾಲಯದ ಏಳು ಜನ ನ್ಯಾಯಾಧೀಶರಿರುವ ಪೀಠವು ಸಂವಿಧಾನದ 226/227 ನೇ ಅನುಚ್ಛೇದಗಳಡಿಯಲ್ಲಿ ಉಚ್ಚ ನ್ಯಾಯಾಲಯಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಪ್ರದತ್ತಗೊಳಿಸಿರುತ್ತದೆ.ಚ ಸಂವಿಧಾನದ 32 ನೇ ಅನುಚ್ಛೇದದಡಿಯಲ್ಲಿ ಸರ್ವೋಚ್ಚ ನ್ಯಾಯಾಲಯವು ನಮ್ಮ ಸಂವಿಧಾನದ ಅನುಲ್ಲಂಘನೀಯ ಮೂಲ ಸ್ವರೂಪದ ಭಾಗವಾಗಿರುತ್ತದೆ.ಈ ಅಧಿಕಾರ ವ್ಯಾಪ್ತಿಯನ್ನು ತೆಕ್ಕೆಗೆ ತೆಗೆದುಕೊಳ್ಳದಿರುವಾಗ, ಇತರೆ ನ್ಯಾಯಾಲಯಗಳು ಹಾಗೂ ನ್ಯಾಯಾಧಿಕರಣಗಳು ಭಾರತ ಸಂವಿಧಾನದ 226/227 ನೇ ಅನುಚ್ಛೇದಗಳು ಹಾಗೂ 32 ನೇ ಅನುಚ್ಛೇದದಿಂದ ಪದತ್ತವಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ಪೂರಕ ಪಾತ್ರವನ್ನು ನಿರ್ವಹಿಸಬಹುದಾಗಿರುತ್ತದೆ.ಇದನ್ನು ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

" ಆದ್ದರಿಂದ, ನಾವು, ಸಂವಿಧಾನದ 226 ನೇ ಅನುಚ್ಛೇದದಡಿಯಲ್ಲಿ ಉಚ್ಚ ನ್ಯಾಯಾಲಯದಲ್ಲಿ ನಿಹಿತವಾದ 32 ನೇ ಅನುಚ್ಛೇದದಡಿಯಲ್ಲಿ ಸರ್ವೋಚ್ಚ ಬ ನ್ಯಾಯಾಲಯದಲ್ಲಿ ನಿಹಿತವಾದ ಶಾಸನಾತ್ಮಕ ಕ್ರಮದ ಮೇಲಿನ ನ್ಯಾಯಿಕ ಪುನರವಲೋಕನದ ಅಧಿಕಾರವು ಸಂವಿಧಾನದ ಮೂಲ ವಿನ್ಯಾಸದ ಭಾಗವನ್ನು ರಚಿಸುವ ಅದರ ಸಮಗ್ರ ಹಾಗೂ ಆವಶ್ಯಕ ಲಕ್ಷಣವಾಗಿರುತ್ತದೆ. ಆದ್ದರಿಂದ, ಸಾಮಾನ್ಯವಾಗಿ ವಿಧಾನಮಂಡಲದ ಸಂವಿಧಾನಾತ್ಮಕ ಸಿಂಧುತ್ವದ ಪರೀಕ್ಷೆಗೆ ಉಚ್ಚ ನ್ಯಾಯಾಲಯದ ಹಾಗೂ ಸರ್ವೋಚ್ಚ ಚ ನ್ಯಾಯಾಲಯದ ಅಧಿಕಾರವು ಇಲ್ಲದಂತಾಗಬಾರದು ಅಥವಾ ಹೊರತುಪಡಿಸಬಾರದು."

ಐ.ಆರ್. ಕೋಲ್ಹ್ (ಮೃತ) ವಾರಸುದಾರರು -ವಿರುದ್ಧ ತಮಿಳುನಾಡು ಸರ್ಕಾರ, ಪ್ರಕರಣದಲ್ಲಿ, ಒಂಭತ್ತು ನ್ಯಾಯಾಧೀಶರುಗಳ ಪೀಠವು ಮತ್ತೊಮ್ಮೆ, ನ್ಯಾಯಿಕ ಪುನರವಲೋಕನದ ಅಧಿಕಾರವು ಸಂವಿಧಾನದ ಮೂಲ ಸ್ವರೂಪದ ಭಾಗವಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.ತಿದ್ದುಪಡಿ ಮಾಡುವ ಅಧಿಕಾರವು ಸಂವಿಧಾನವನ್ನು ರೂಪಿಸುವ ಅಧಿಕಾರದೊಂದಿಗೆ ಸಮೀಕರಿಸಲಾಗುವುದಿಲ್ಲ.

13. ಸಂವಿಧಾನದ 226/227 ನೇ ಅನುಚ್ಛೇದಗಳಡಿಯಲ್ಲಿನ ನ್ಯಾಯಿಕ ಪುನರವಲೋಕನದ ಅಧಿಕಾರವು ಸಂವಿಧಾನದ ಆವಶ್ಯಕ ಲಕ್ಷಣವಾಗಿದ್ದು, ಇದನ್ನು ತೇಪೆ ಹಚ್ಚುವ ಅಥವಾ ಸವೆಸುವಂತಾಗಬಾರದು.ಸಂವಿಧಾನವನ್ನು ಸಂವಿಧಾನದ ಮೂಲ ವಿನ್ಯಾಸವನ್ನು ಸವೆಸಲು ತಿದ್ದುಪಡಿ ಮಾಡುವಂತಿರುವುದಿಲ್ಲ.ಆದ್ದರಿಂದ ಸಂವಿಧಾನದ 226 ನೇ ಅನುಚ್ಛೇದದಡಿಯಲ್ಲಿನ 6 ರಿಂದ 9 ರ ವರೆಗಿನ ಪ್ರತ್ಯರ್ಜಿದಾರರು ಸಲ್ಲಿಸಿದ ರಿಟ್ ಅರ್ಜಿಯನ್ನು ಊರ್ಜಿತವಾಗಿರುವುದಿಲ್ಲವೆಂದು

ಹೇಳಲಾಗುವುದಿಲ್ಲ.ಆದಾಗ್ಯೂ, ರಿಟ್ ಅರ್ಜಿಯನ್ನು ಅಂಗೀಕರಿಸಲು 226/227 ನೇ ಅನುಚ್ಛೇದಗಳಡಿಯಲ್ಲಿ ಅಧಿಕಾರವನ್ನು ಚಲಾಯಿಸುವುದನ್ನು ನ್ಯಾಯಾಲಯದ ವಿವೇಚನೆಗೆ ಬಿಟ್ಟಿರುತ್ತದೆ.

14. ಮಾನ್ಯ ಹಿರಿಯ ನ್ಯಾಯವಾದಿಗಳು ಉದಾಹರಿಸಿದ ಚರಣ್ ಲಾಲ್ ಸಾಹು ( ಈ ಹಿಂದೆ ಹೇಳಿದ ಪ್ರಕರಣದಲ್ಲಿ ಪರಿಗಣನೆಗೆ ಸಂಬಂಧಿಸಿದ ಪ್ರಶ್ನೆಯು ಅಧ್ಯಕ್ಷೀಯ ಹಾಗೂ ಉಪಾಧ್ಯಕ್ಷೀಯ ಚುನಾವಣೆಗಳ ಅಧಿನಿಯಮ, 1952 ರ 14 ಎ ಪ್ರಕರಣದಡಿಯಲ್ಲಿ ಯುಕ್ತವಾಗಿ ನಾಮ ನಿರ್ದೇಶಿತರಾದಂಥ ಭಾರತದ ಅಧ್ಯಕ್ಷರ ಪದದ ಆಯ್ಕೆಯನ್ನು ಪ್ರಶ್ನಿಸಿ ಅಭ್ಯರ್ಥಿಯು ಸಲ್ಲಿಸಿದ ಚುನಾವಣಾ ಅರ್ಜಿಯ ಊರ್ಜಿತತ್ವವಾಗಿರುತ್ತದೆ.ಈ ತೀರ್ಪನ್ನು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳಿಗೆ ಅನ್ವಯಿಸಲಾಗುವುದಿಲ್ಲ.

15. ಮೇಲೆ ಗಮನಿಸಲಾದಂತೆ, 6 ರಿಂದ 9 ರ ವರೆಗಿನ ಪ್ರತ್ಯರ್ಜಿದಾರರು ಮತದಾರರಾಗಿದ್ದಾಗ್ಯೂ, ಜಿಲ್ಲಾ ಪಂಚಾಯತ್ನ ಸದಸ್ಯರಾಗಿರುವುದಿಲ್ಲ.ಅವರುಗಳು, ಅಧ್ಯಕ್ಷರ ಪದಕ್ಕೆ ಅಪೀಲುದಾರರನ್ನು ಆಯ್ಕೆ ಮಾಡಿದುದರಿಂದ ಬಾಧಿತರಾಗಿರುತ್ತಾರೆ.ಅವರುಗಳು ಪ್ರಶ್ನಿತ ಜಿಲ್ಲಾ ಪಂಚಾಯತ್ನ ಸದಸ್ಯರಾಗಿಲ್ಲದಿರುವುದರಿಂದ ಚುನಾವಣಾ ಅರ್ಜಿಯನ್ನು ಸಲ್ಲಿಸುವ ಮೂಲಕ ಅಧ್ಯಕ್ಷ ಪದಕ್ಕೆ ಅಪೀಲುದಾರರ ಆಯ್ಕೆಯನ್ನು ಪ್ರಶ್ನಿಸಲಾಗುವುದಿಲ್ಲ.ನಮ್ಮ ದೃಷ್ಟಿಯಲ್ಲಿ ಸದಸ್ಯನಾಗಿರದ ಜಿಲ್ಲಾ ಪಂಚಾಯತ್ನ ಮತದಾರನು ಸಂವಿಧಾನದ 226/227 ನೇ ಅನುಚ್ಛೇದಗಳಡಿಯಲ್ಲಿ ಅಧ್ಯಕ್ಷರ ಪದದ ಚುನಾವಣೆಯನ್ನು ಪ್ರಶ್ನಿಸುವ ಅವಕಾಶವನ್ನು ನಿರಾಕರಿಸಲಾಗುವುದಿಲ್ಲ.ಆದ್ದರಿಂದ, ನಾವು, ಉಚ್ಚ ನ್ಯಾಯಾಲಯದ ಮುಂದೆ 6 ರಿಂದ 9 ರ ವರೆಗಿನ ಪ್ರತ್ಯರ್ಜಿದಾರರು ಚ ಸಲ್ಲಿಸಿದ ರಿಟ್ ಅರ್ಜಿಯು ಊರ್ಜಿತವಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತೇವೆ.

16. ಅಪೀಲುದಾರಳು,ದಿನಾಂಕ: 20.02.2016 ರಂದು ನಡೆದ ಚುನಾವಣೆಯಲ್ಲಿ ಜಿಲ್ಲಾ ಪಂಚಾಯತ್ನ ಅಧ್ಯಕ್ಷಳಾಗಿ ಆಯ್ಕೆಯಾಗಿರುತ್ತಾಳೆ.ಮೇಲೆ ಗಮನಿಸಲಾದಂತೆ, ವಿಭಾಗೀಯ ಪೀಠವು, ಪಕ್ಷಕಾರರ ಎಲ್ಲಾ ಇತರೆ ವಾದಗಳನ್ನು ಮುಕ್ತವಾಗಿಟ್ಟುಕೊಂಡು ಮೊಕದ್ದಮೆಯ ವಿಲೆಗೆ ಸಂಬಂಧಿಸಿದಂತೆ ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರಿಗೆ ಸದರಿ ಮೊಕದ್ದಮೆಯನ್ನು ಹಿಂದಕ್ಕೆ ಕಳುಹಿಸಿರುತ್ತದೆ.ಆದ್ದರಿಂದ, ನಾವು ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ನಾಲ್ಕು ವಾರಗಳೊಳಗೆ ಆದ್ಯತೆ ನೀಡಿ ಸಾಧ್ಯವಾದಷ್ಟು ಶೀಘ್ರವಾಗಿ ರಿಟ್ ಅರ್ಜಿಯ ವಿಲೆಗೆ ಉಚ್ಚ ನ್ಯಾಯಾಲಯದ ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರನ್ನು ಕೋರುತ್ತೇನೆ.ರಿಟ್ ಅರ್ಜಿಯ ವಿಲೆಯವರೆಗೂ ನಾವು ಕಾನೂನಿಗನುಸಾರವಾಗಿ ಬಳ್ಳಾರಿಯ ಜಿಲ್ಲಾ ಪಂಚಾಯತ್ನ ಅಧ್ಯಕ್ಷರ ಪ್ರಕಾರ್ಯಗಳನ್ನು ನಿರ್ವಹಿಸಲು ಅಪೀಲುದಾರರಿಗೆ ಅನುಮತಿಸಿರುತ್ತೇವೆ.ಇವರ ಮುಂದುವರಿಕೆಯು ರಿಟ್ ಅರ್ಜಿಯ ತೀರ್ಪಿಗೆ ಒಳಪಟ್ಟಿರುತ್ತದೆ.ಅಪೀಲನ್ನು ತದನುಸಾರವಾಗಿ ವಿಲೆ ಮಾಡಲಾಗಿರುತ್ತದೆ.

17. ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.